**<u>ಸಾಕ್ಷಿಯನ್ನು ದಿನಾಂಕಃ 03.08.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತುಃ</u>**

**<u>ಮುಂದುವರೆದ ಪಾಟೀ ಸವಾಲುಃ ಪಿರ್ಯಾದಿದಾರರ ಪರವಾಗಿ ಶ್ರೀ.ವಿ.ಆರ್.ಹೆಚ್. ವಕೀಲರಿಂದಃ</u>**

21. ನಾನು ನಮ್ಮ ವಕೀಲರ ಮುಖಾಂತರ ಕಳುಹಿಸಿದ ನಿ.ಪಿ.8 ನೋಟೀಸಿನಲ್ಲಿ ಆರೋಪಿಯು ಮಟೀರಿಯಲ್ ಮುಟ್ಟಿದ ಮೂರು ತಿಂಗಳ ಒಳಗಾಗಿ ಹಣ ಕೊಡುತ್ತೇನೆ ಅಂತ ಒಪ್ಪಿಕೊಂಡಿದ್ದರು ಅಂತ ಹೇಳಿರುತ್ತೇನೆ ಅಂದರೆ ಸರಿ. ನಾನು ಸಲ್ಲಿಸಿದ ಪಿರ್ಯದಿಯ ಖಂಡಿಕೆ 3 ರಲ್ಲಿ ಇರುವ ಸಂಗತಿ ಮತ್ತು ನನ್ನ ಪ್ರಮಾಣ ಪೂರ್ವ ಹೇಳಿಕೆ ಖಂಡಿಕೆ 1 ರಲ್ಲಿ ಇರುವ ಸಂಗತಿಯು ನಿ.ಪಿ.8 ರಲ್ಲಿರುವ ಸಂಗತಿಯ ವಿರುದ್ಧವಾಗಿರುತ್ತದೆ ಅಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಅಂತ ನುಡಿಯುತ್ತಾರೆ. ನಾನು ಪಿರ್ಯಾದಿಯ ಖಂಡಿಕೆ 3 ರಲ್ಲಿ ಮತ್ತು ನನ್ನ ಪ್ರಮಾಣ ಪೂರ್ವ ಹೇಳಿಕೆಯ ಖಂಡಿಕೆ1 ರಲ್ಲಿರುವಂತೆ ಆರೋಪಿಯು delivery purchase ಮಾಡಿದ ಮೂರು ತಿಂಗಳ ಒಳಗೆ ಹಣ ಕೊಡುತ್ತೇನೆ ಅಂತ ಹೇಳಿದ ಸಂಗತಿಯ ಬಗ್ಗೆ ಸುಳ್ಳಾಗಿ ತೋರಿರುತ್ತೇನೆ ಅಂದರೆ ಸರಿಯಲ್ಲ. ನಾವು ಮಟೀರಿಯಲ್ ಡೆಲಿವರಿ ಮಾಡಿದ ದಿನಾಂಕದ ಬಗ್ಗೆ ರಿಜಿಸ್ಟರ್ ನಲ್ಲಿ ನೋಂದಣಿ ಮಾಡುತ್ತೇವೆ, ಅದರ ಆಧಾರದ ಮೇಲೆ ಮೂರು ತಿಂಗಳ ಅವಧಿ ಗೊತ್ತಾಗುತ್ತದೆ ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬಿಲ್ ನಲ್ಲಿ ದಿನಾಂಕ ಇರುತ್ತದೆ ಅಂತ ನುಡಿಯುತ್ತಾರೆ.

22. ನಾನು ಹಾಜರುಪಡಿಸಿರುವ invoice ರಶೀದಿಗಳಲ್ಲಿ ಇಂತಹ ದಿನ ಮಟೀರಿಯಲ್ಸ್ ಡೆಲಿವರಿಯಾಗಿರುತ್ತದೆ ಅಂತ ನಮೂದು ಆಗಿಲ್ಲ ಅಂದರೆ ಸರಿ. ಮಟೀರಿಯಲ್ ಡೆಲಿವರಿ ಮಾಡಿದ ಬಗ್ಗೆ ಒಂದು ಸ್ವಿಕೃತಿ ದಾಖಲೆ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಆ ದಾಖಲೆಗಳು ನಮ್ಮ ಬಳಿ ಇದ್ದು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಅಂದರೆ ಸರಿ. ನಾವು ಪಡೆದುಕೊಂಡ ಸ್ವಿಕೃತಿಗಳಿಗೆ ನಾವು POD

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-3.pdf

ದಾಖಲೆ ಅಂತ ಕರೆಯುತ್ತೇವೆ. POD ದಾಖಲೆ ನಾವು ಸ್ವೀಕರಿಸಿದ ನಂತರ ಬಿಲ್ಲು ತಯಾರಿಸಿರುತ್ತೇವೆ ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾವು Panasonic company ಅವರು ಬಿಲ್ಲು ಮಾಡಿದ ತಕ್ಷಣ ನಾವು ಬಿಲ್ ಮಾಡುತ್ತೇವೆ ಅಂತ ನುಡಿಯುತ್ತಾರೆ. ನಾವು ಆರೋಪಿಗೆ Panasonic company ಯವರು ಮಟೀರಿಯಲ್ಸ್/ ಗೂಡ್ಸ್ ಸಪ್ಲೈ ಮಾಡಿದ ಬಗ್ಗೆ ನಾನು ಬಿಲ್ಲು ಕೊಟ್ಟಿರುತ್ತೇನೆ ಅಂದರೆ ಸರಿ.

23. ನಿ.ಪಿ.1,3 ರಿಂದ 5 invoice ರಶೀದಿಗಳ ಪ್ರಕಾರ ಆರೋಪಿಗೆ ಗೂಡ್ಸ್ ಸಪ್ಲೈ ಮಾಡಿದ ಬಗ್ಗೆ ಸ್ವಿಕೃತಿ ದಾಖಲೆ ನಮ್ಮ ಬಳಿ ಇರುತ್ತವೆ. ನಿ.ಪಿ.1 ರ ಪ್ರಕಾರ ಆರೋಪಿಗೆ ಗೂಡ್ಸ್ ಕಳುಹಿಸಿ ಅವರ ಕಡೆಯಿಂದ ಸ್ವಿಕೃತಿ ದಾಖಲೆಯನ್ನು ಯಾವ ದಿನಾಂಕದಂದು ಪಡೆದುಕೊಂಡಿರುತ್ತೀರಾ ಅಂತ ಪ್ರಶ್ನೆ ಕೇಳಿದಾಗ, ಸಾಕ್ಷಿಯು ಬಿಲ್ ಆದ 25 ದಿವಸಗಳ ನಂತರ ಗೂಡ್ಸ್ ಆರೋಪಿಗೆ ತಲುಪಿರುತ್ತದೆ ಅಂತ ನುಡಿಯುತ್ತಾರೆ. ನನಗೆ ನಿಖರವಾಗಿ ದಿನಾಂಕ ಹೇಳಲು ಆಗುವುದಿಲ್ಲ ಅಂದರೆ ಸರಿ. ನಿ.ಪಿ.3 ರ ಪ್ರಕಾರ ಆರೋಪಿ ಯಾವ ದಿನಾಂಕದಂದು ಗೂಡ್ಸ್ ಅನ್ನು ಸ್ವಿಕೃತಿ ಮಾಡಿರುತ್ತಾನೆ ಅಂತ ಪ್ರಶ್ನೆ ಕೇಳಿದಾಗ ಸಾಕ್ಷಿಯು ನಮ್ಮ ಅಂಗಡಿಯ ಬಳಿ ಬಂದು ಅದೇ ದಿನ ಗೂಡ್ಸ್ ಅನ್ನು ತೆಗೆದುಕೊಂಡಿರುತ್ತಾನೆ ಅಂತ ನುಡಿಯುತ್ತಾರೆ.

24. ನಿ.ಪಿ.4 ರ ಪ್ರಕಾರ ಆರೋಪಿಯು ಗೂಡ್ಸ್ ಅನ್ನು ಸ್ವೀಕರಿಸಿ ನಿಮಗೆ ಯಾವ ದಿನಾಂಕದಂದು ಸ್ವೀಕೃತಿ ದಾಖಲೆಯನ್ನು ಕೊಟ್ಟೀರುತ್ತಾರೆ ಅಂತ ಕೇಳಿದಾಗ ಸಾಕ್ಷಿಯು transport ಅವರ ಬಳಿ ಇರುತ್ತದೆ ಅಂತ ನುಡಿಯುತ್ತಾರೆ. ಪಿರ್ಯಾದಿಯಲ್ಲಾಗಲೀ, ನೋಟೀಸಿನಲ್ಲಾಗಲೀ ಮತ್ತು ನನ್ನ ಪ್ರಮಾಣ ಪೂರ್ವ ಹೇಳಿಕೆಯಲ್ಲಾಗಲೀ ನಿ.ಪಿ.1, ನಿ.ಪಿ.3 ರಿಂದ 5 ರ ರಶೀದಿಯಲ್ಲಿ ತೋರಿಸಿರುವ ಗೂಡ್ಸ್ಗಳನ್ನು ಇಂತಹ ದಿನಾಂಕದಂದು ಸ್ವಿಕರಿಸಿರುತ್ತಾನೆ ಅನ್ನುವ ಬಗ್ಗೆ ಹೇಳಿಲ್ಲ ಅಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-3.pdf

25. GST ಕಾನೂನಿನ ಸಲುವಾಗಿ ನಾವು stock book ನಿರ್ವಹಣೆ ಮಾಡುತ್ತೇವೆ ಅಂದರೆ ಸರಿ. ಆ stock book ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಅಂದರೆ ಸರಿ. ನಿ.ಪಿ.1, 3 ಮತ್ತು 4 ರ ಒಟ್ಟು ಮೊತ್ತ ರೂ.7,08,029/- GST ಸೇರಿ ಆಗಿರುತ್ತದೆ ಅಂದರೆ ಸರಿ. ನಿ.ಪಿ.1, 3 ರಿಂದ 4 ಬಿಲ್ಲುಗಳಲ್ಲಿ ತೋರಿಸಿದ ಮೊತ್ತವನ್ನು ಆ ಬಿಲ್ಲುಗಳಲ್ಲಿ ಇರುವ ದಿನಾಂಕದ ಮಾರನೇ ತಿಂಗಳಿನಲ್ಲಿ GST returns ದಲ್ಲಿ ತೋರಿಸಿರುತ್ತೇನೆ. GST returns ದಾಖಲೆ ನನ್ನ ಬಳಿ ಇರುತ್ತದೆ ಮತ್ತು ಆ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಅಂದರೆ ಸರಿ. ನಿ.ಪಿ.1, 3 ರಿಂದ 4 ರಲ್ಲಿಯ ಮೊತ್ತಗಳನ್ನು GST returns ನಲ್ಲಿ ತೋರಿಸಿಲ್ಲ ಅಂದರೆ ಸರಿಯಲ್ಲ.

26. ನಾನು ಆರೋಪಿಯನ್ನು ಯಾವ ದಿನಾಂಕದಂದು ಭೇಟಿಯಾಗಿರುತ್ತೇನೆ ಅಂತ ಹೇಳಲು ಆಗುವುದಿಲ್ಲ. ನಾನು ನಿ.ಪಿ.3 ನೋಟೀಸಿನಲ್ಲಿ ಹೇಳಿದಂತೆ ಮೂರು ತಿಂಗಳ ಅವಧಿ ಮುಗಿದ ನಂತರ ಆರೋಪಿತರ ಬಳಿ ಹೋಗಿ ಬಿಲ್ಲಿನ ಹಣ ಪಾವತಿ ಮಾಡುವಂತೆ ಕೇಳಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಡಿಸೆಂಬರ್ 2022 ರ ಮೊದಲನೇ ವಾರದಲ್ಲಿ ಯಾವ ದಿನಾಂಕದಂದು ಆರೋಪಿಗೆ ಬಿಲ್ಲಿನ ಹಣ ಮರುಪಾವತಿ ಮಾಡುವಂತೆ ಹೇಳಿದ್ದೇನೆ ಅಂತ ನನಗೆ ಹೇಳಲು ಆಗುವುದಿಲ್ಲ. ನಾನು ಆರೋಪಿಗೆ ರೂ.5,72,502/- ಮೊತ್ತ ಮರುಪಾವತಿ ಕೇಳಿ ಡಿಸೆಂಬರ್ 2022 ರ ಮೊದಲನೇ ವಾರದಲ್ಲಿ ಹೋಗಿದ್ದೆ ಅಂದರೆ ಸರಿ, ಸಾಕ್ಷಿ ಮುಂದುವರೆದು ಬಾಕಿ ಉಳಿದ ಮೊತ್ತ ಬಿಟ್ಟು ಕೊನೆಯ ಬಿಲ್ಲನ್ನು ಬಿಟ್ಟು ಮೊತ್ತ ಕೇಳಲು ಹೋಗಿದ್ದೆ ಅಂತ ನುಡಿಯುತ್ತಾರೆ. ಡಿಸೆಂಬರ್ 2022 ರ ಮೊದಲನೇ ವಾರದಲ್ಲಿ ರೂ.5,72,502/- ಮೊತ್ತ ಬಾಕಿ ಇತುತ ಅಂತ ತೋರಿಸಲು ಈ ಪ್ರಕರಣದಲ್ಲಿ ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಅಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-3.pdf

27. ಡಿಸೆಂಬರ್ 2022 ರ ಮೊದಲನೇ ವಾರದಲ್ಲಿ ಆರೋಪಿಯು ಒಟ್ಟು ರೂ.4,33,029/- ಬಾಕಿ ಮೊತ್ತ ಉಳಿಸಿಕೊಂಡಿದ್ದನು ಅಂದರೆ ಸರಿ. ಆರೋಪಿಯು ಕೇವಲ 4,33,029/- ಬಾಕಿ ಹಣ ಉಳಿಸಿಕೂಂಡಿದ್ದರಿಂದ ರೂ.5,72,502/- ಮೊತ್ತದ ಚೆಕ್ಕು ಕೊಡುವ ಅವಶ್ಯಕತೆ ಇರಲಿಲ್ಲ ಅಂದರೆ ಸರಿ, ಸಾಕ್ಷಿ ಮುಂದುವರೆದು ನಿ.ಪಿ.6 ಅನ್ನು ನಾನು ದಿಃ 27.12.2022 ರಂದು ಪಡೆದುಕೊಂಡಿದ್ದೆ ಅಂತ ನುಡಿಯುತ್ತಾರೆ. ಡಿಸೆಂಬರ್ 2022 ರ ಮೊದಲನೇ ವಾರದಿಂದ ದಿಃ 27.12.2022 ರ ಅವಧಿಯಲ್ಲಿ ನಾನು ಯಾವುದೇ ಗೂಡ್ಸ್ ಸಪ್ಲೈ ಮಾಡಿರುವುದಿಲ್ಲ ಮತ್ತು ಯಾವುದೇ ವ್ಯವಹಾರ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಆ ಅವಧಿಯಲ್ಲಿ ವ್ಯವಹಾರ ಮಾಡಿದ ಬಗ್ಗೆ ಬಿಲ್ಲು ರಶೀದಿಗಳನ್ನು ಹಾಜರುಪಡಿಸಿರುತ್ತೇನೆ.

28. ಸಾಕ್ಷಿಗೆ ಕಡತವನ್ನು ತೋರಿಸಿ ಆ ಅವಧಿಯಲ್ಲಿ ನೀವು ಹಾಜರುಪಡಿಸಿದ ದಾಖಲೆ ಯಾವುದು ಅಂತ ಪ್ರಶ್ನೆ ಕೇಳಿದಾಗ ಸಾಕ್ಷಿಯು ಕಡತವನ್ನು ನೋಡಿ ಯಾವುದೇ ದಾಖಲೆ ಇರುವುದಿಲ್ಲ, ದಿನಾಂಕ 29.12.2022 ರ ದಾಖಲೆ ಇರುತ್ತದೆ ಅಂತ ನುಡಿಯುತ್ತಾರೆ. ನಿ.ಪಿ.5 ರಲ್ಲಿರುವ ಗೂಡ್ಸ್ ಅನ್ನು ಆರೋಪಿಗೆ ಡೆಲಿವರಿ ಮಾಡಿದ ಬಗ್ಗೆ POD ದಾಖಲೆಯನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ನಿ.ಪಿ.5 ರಲ್ಲಿರುವ ಗೂಡ್ಸ್ ಅನ್ನು ಆರೋಪಿಗೆ ನಾವು ಡೆಲಿವರಿ ಮಾಡಿಲ್ಲ ಅಂದರೆ ಸರಿಯಲ್ಲ. ನಿ.ಪಿ.5 ಕ್ಕೆ ಸಂಬಂಧಿಸಿದ eway bill ಅನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಅಂದರೆ ಸರಿ. ನಿ.ಪಿ.5 ರಲ್ಲಿರುವ ಗೂಡ್ಸ್ ಅನ್ನು ಆರೋಪಿಗೆ ಅದೇ ದಿನ ಅಂದರೆ ದಿಃ 29.12.2022 ರಂದು ಡೆಲಿವರಿ ಮಾಡಿರುತ್ತೇವೆ.

29. ಸಾಕ್ಷಿಗೆ ವಕೀಲರು ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ನಿ.ಪಿ.5 ಬಿಲ್ಲಿಗೆ ಸಂಬಂಧಿಸಿದ eway bill ಆಗಿರುತ್ತದೆ ಅಂತ ಪ್ರಶ್ನೆ ಕೇಳಿದಾಗ ಸಾಕ್ಷಿಯು ಆ ದಾಖಲೆಯನ್ನು ನೋಡಿ ಹೌದು ಎಂದು ಒಪ್ಪಿಕೊಂಡಿದ್ದರಿಂದ **ಸದರಿ**

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-3.pdf

**ದಾಖಲೆಯನ್ನು ನಿ.ಡಿ.10 ಎಂದು ಗುರುತಿಸಲಾಯಿತು.** ನಿ.ಡಿ.10 eway bill generate ಆದ ನಂತರ ಮಟೀರಿಯಲ್ ಡೆಲಿವರಿಯಾಗುತ್ತದೆ ಅಂದರೆ ಸರಿ. ನಿ.ಡಿ.10 ದಾಖಲೆಯು ದಿಃ30.12.2022 ರಂದು generate ಆಗಿರುತ್ತದೆ ಅಂದರೆ ಸರಿ. ನಿ.ಪಿ.5 ರ ಬಿಲ್ಲಿಗೆ ಸಂಬಂಧಿಸಿದಂತೆ ನಾವು ಗೂಡ್ಸ್ ಡೆಲಿವರಿ ಮಾಡದೇ ಇದ್ದ ಕಾರಣ ಆರೋಪಿಯು GST ಹಣ ರೂ.70,851.82/- ಹಣವನ್ನು ನಮಗೆ ಮರಳಿ ಕಳುಹಿಸಿದ ಬಗ್ಗೆ (Reversal entry) ಮಾಡಿದ ವಿಷಯ ನನಗೆ ಗೊತ್ತಿರುತ್ತದೆ ಅಂದರೆ ಸರಿಯಲ್ಲ.

30. ದಿಃ 19.12.2022 ರ ನಂತರ ಆರೋಪಿಯು ನಮಗೆ ಯಾವುದೇ ಹಣ ಕೊಡುವುದು ಬಾಕಿ ಇರಲಿಲ್ಲ ಅಂದರೆ ಸರಿಯಲ್ಲ. ಸಹಿ ಮಾಡಿದ ಚೆಕ್ಕು ನಮ್ಮ ಕೈನಲ್ಲಿ ಇದ್ದಿದ್ದರಿಂದ ನಿ.ಪಿ.5 ದಾಖಲೆಯನ್ನು ಸೃಷ್ಟಿಸಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿ.ಪಿ.4 ಚೆಕ್ಕನ್ನು ದಿಃ 30.12.2022 ರಂದು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಆರೋಪಿಯು ನಮಗೆ ದಿಃ 27.12.2022 ರಿಂದ ದಿಃ 29.12.2022 ರ ಅವಧಿಯಲ್ಲಿ ಯಾವುದೇ ಹಣ ಕೊಡುವುದು ಬಾಕಿ ಇರದೇ ಇರುವ ಕಾರಣ ನಿ.ಪಿ.5 ಅನ್ನು ಸೃಷ್ಟಿ ಮಾಡಿ ಚೆಕ್ಕನ್ನು ದಿಃ 30.12.2022 ರಂದು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇವೆ ಅಂದರೆ ಸರಿಯಲ್ಲ. ನಿಪಿ.6 ರಲ್ಲಿರುವ ಆರೋಪಿ ಹೆಸರಿಗೂ ನಾನು ನನ್ನ ಪಿರ್ಯಾದಿಯಲ್ಲಿ ತೋರಿಸಿರುವ ಆರೋಪಿ ಹೆಸರಿಗೂ ವ್ಯತಾಸ ಇರುತ್ತದೆ ಅಂದರೆ ಸರಿ.

ನಿ.ಪಿ. 1 ರಿಂದ 3 ರಲ್ಲಿರುವ ಸಹಿಗಳು ಮತ್ತು ನಿ.ಪಿ.5 ರಲ್ಲಿರುವ ಸಹಿಯು ವ್ಯತ್ಯಾಸ ಇರುತ್ತದೆ ಅಂದರೆ ಸರಿಯಲ್ಲ. ನಮಗೆ ಯಾವುದೇ ಹಣ ಬರುವುದು ಬಾಕಿ ಇರದೇ ಇದ್ದರೂ ಕೂಡಾ ನಿ.ಪಿ.6 ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-3.pdf

www.ecourtsindia.com

www.ecourtsindia.com

**SCCH-26** **CC. 2516/2023**
**PW-1**

<u>**ಮರುವಿಚಾರಣೆಃ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**24 ನೇ ಎ ಎಸ್ ಸಿ ಜೆ ಮತ್ತು ಎ ಸಿ ಜೆ ಎಂ**

**ಬೆಂಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-3.pdf